**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 237/2017**

ಹೆಸರುಃ ರಾಘವೇಂದ್ರ ಕಾಂಡಿಕೆ ಸಿ.ಡಬ್ಲ್ಯೂಃ 11

ವಯಸ್ಸುಃ 42 ಪಿ.ಡಬ್ಲ್ಯೂಃ 11

ತಂದೆಃ ಸುರೇಶಪ್ಪ

ಉದ್ಯೋಗಃ ಪಿ ಐ ಹಿರಿಯೂರು ನಗರ ಪೊ ಠಾಣೆ

ವಾಸ ಸ್ಥಳಃ ಹಿರಿಯೂರು

ಸಾಕ್ಷಿಗೆ ದಿನಾಂಕಃ 23.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

ಡಿಸೆಂಬರ್ 2014 ರಿಂದ ಆಗಸ್ಟ್ 2014 ರವರೆಗೆ ಪಿ.ಎಸ್.ಐ ಆಗಿ ಚನ್ನಗಿರಿ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05-08-2015 ರಂದು ಚಾಸಾ 10 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇದಿನ ಆರೋಪಿಯನ್ನು ಠಾಣೆಗೆ ಹಾಜರುಪಡಿಸಿಕೊಂಡು ಆತನಿಗೆ ದಂ.ಪ್ರ. ಸಂಹಿತೆ ಕಲಂ 41(ಎ) ಅಡಿಯಲ್ಲಿ ನೋಟೀಸನ್ನು ಜಾರಿಮಾಡಿರುತ್ತೇನೆ. ಅದೇ ದಿನ ಸದರಿ ಆರೋಪಿಯನ್ನು ವಿಚಾರಣೆ ಮಾಡಿ ಸ್ವ ಇಚ್ಛಾ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 18-08-2015 ರಂದು ಸದರಿ ಪ್ರಕರಣದಲ್ಲಿ ಅಮಾನತು ಪಡಿಸಿಕೊಂಡ ಮ್ಯುಟೇಷನ್ ಹಾಗೂ ಇತರೆ ದಾಖಲೆಗಳನ್ನು ಖಚಿತತೆಯನ್ನು ದೃಢಪಡಿಸಿಕೊಳ್ಳಲು ಚಾಸಾ 1 ರವರಿಗೆ ಪತ್ರ ಬರೆದಿರುತ್ತೇನೆ. ದಿಃ 19-11-2015 ರಂದು ಚಾಸಾ 1 ರವರಿಂದ ಸದರಿ ಮೇಲ್ಕಂಡ ದಾಖಲಾತಿಗಳಿಗೆ ಸಂಬಂಧಿಸಿದಂತೆ ಚಾಸಾ 1 ರವರು ವರದಿಯನ್ನು ಕಳುಹಿಸಿಕೊಟ್ಟಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗಿ ತಿದ್ದುಪಡಿ ಆಗಿರುತ್ತದೆ ಎಂದು ದೃಢಪಡಿಸಿರುತ್ತಾರೆ. ನಂತರ ಸದರಿ ದಾಖಲೆಯನ್ನು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 19-11-2015 ರ ಪತ್ರ ವನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ನಿಪಿ 10 ಹಾಗೂ ಸಹಿಯನ್ನು 10 ಎ ಎಂದು ಗುರುತಿಸಲಾಯಿತು. ಅದೇ ದಿನ ಸದರಿ ತಿದ್ದುಪಡಿ ದಾಖಲಾತಿಗಳನ್ನು ಠಾಣಾ ಮಾಲುಪಟ್ಟಿ ಸಂಃ 277/2015 ರಲ್ಲಿ ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ಎಫ್ ಎಸ್ ಎಲ್

ರಿಪೋರ್ಟ್ ಪಡೆಯಲು ಕಳುಹಿಸಲಾಗಿದ್ದು ಅದರ ದೃಢೀಕೃತ ಪ್ರತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಕ್ರಮವಾಗಿ ನಿಪಿ 11 ಹಾಗೂ 12 ಎಂದು ಮತ್ತು 11(ಎ) ಹಾಗೂ 12(ಎ) ಎಂದು ಸಹಿಗಳನ್ನು ಗುರುತಿಸಲಾಯಿತು. ನಂತರ ದಿಃ 31-12-2015 ರಂದು ಚಾಸಾ 8 ರವರ ಮುಖಾಂತರ ಪ್ರಸ್ತುತ ಪ್ರಕರಣದ ತಿದ್ದುಪಡಿಯಾದ ದಾಖಲೆಗಳನ್ನು ತಜ್ಞರ ವಿಶ್ಲೇಷಣಾ ವರದಿಯನ್ನು ಕೋರಿ ಎಫ್ ಎಸ್ ಎಲ್ ಬೆಂಗಳೂರಿಗೆ ಕಳುಹಿಸಿ ಕೊಟ್ಟಿರುತ್ತೇನೆ.

ದಿಃ 02-01-2016 ರಂದು ಚಾಸಾ 8 ರವರು ಠಾಣೆಗೆ ಹಾಜರಾಗಿ ಸದರಿ ದಾಖಲೆಗಳನ್ನು ಎಫ್ ಎಸ್ ಎಲ್ ಗೆ ಸಲ್ಲಿಸಿರುವ ಸ್ವೀಕೃತಿಯನ್ನು ತಂದು ಹಾಜರುಪಡಿಸಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಹಾಯಕ ಸರ್ಕಾರಿ ಅಭಿಯೋಜಕರು ಸಮಯಾವಕಾಶ ಕೋರಿರುವುದರಿಂದ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**Sd/-**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**